# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ.644/2015/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:26.9.2016.

***ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ***

ವಿಷಯ: **ಶ್ರೀ ಉಜ್ಜಿನಯ್ಯ, ಲಕ್ಷ್ಮೀಪುರ ವಾಸಿ, ಸಂಡೂರು ತಾಲ್ಲೂಕು, ಅವರು ಶ್ರೀ ತಿಮ್ಮಯ್ಯ, ತಹಶೀಲ್ದಾರ್, ಸಂಡೂರು, ಹಾಗೂ (2) ಶ್ರೀ ಮಹಬೂಬ್ ಸಾಬ್, ಕಂದಾಯ ನಿರೀಕ್ಷಕರು, ಚೋರನೂರು,** ರವರ ವಿರುದ್ದ ಸಲ್ಲಿಸಿದ ದೂರಿನ ಕುರಿತು.

****

**ಶ್ರೀ ಉಜ್ಜಿನಯ್ಯ, ಲಕ್ಷ್ಮೀಪುರ ವಾಸಿ, ಸಂಡೂರು ತಾಲ್ಲೂಕು,** (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ), ಇವರು **ಶ್ರೀ ತಿಮ್ಮಯ್ಯ, ತಹಶೀಲ್ದಾರ್, ಸಂಡೂರು, ಹಾಗೂ (2) ಶ್ರೀ ಮಹಬೂಬ್ ಸಾಬ್, ಕಂದಾಯ ನಿರೀಕ್ಷಕರು, ಚೋರನೂರು,** (ಇನ್ನು ಮುಂದೆ ' **ಎದುರುದಾರರು ' ಎಂದು ಕರೆಯಲ್ಪಡುತ್ತಾರೆ**) ರವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ.9ರಡಿಯಲ್ಲಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2) ದೂರಿನ ಸಾರಾಂಶವೇನೆಂದರೆ; **ಬಳ್ಳಾರಿ ಜಿಲ್ಲೆ, ಬೊಮ್ಮಗಟ್ಟ ಗ್ರಾಮದಲ್ಲಿರುವ ರಸ್ತೆಯನ್ನು ಹಾಗೂ ಸರ್ಕಾರಿ ಪ್ರೌಢಶಾಲೆಯ ಜಾಗವನ್ನು ಡಾ.ಪ್ರಸನ್ನ ಮತ್ತು ಡಾ.ನಿಂಗಪ್ಪ, ಇವರು ಒತ್ತುವರಿ ಮಾಡಿದ್ದು, ದೂರುದಾರರು ದಿ.19.9.2014ರಂದು ಸದರಿ ಒತ್ತುವರಿಯನ್ನು ಬಿಡಿಸಿಕೊಡುವಂತೆ 1ನೇ ಎದುರುದಾರರಿಗೆ ಮನವಿ ಸಲ್ಲಿಸಿದ್ದು, 1ನೇ ಎದುರುದಾರರು, ಚೋರನೂರು ಕಂದಾಯ ನಿರೀಕ್ಷಕರು ಮತ್ತು ತಾಲ್ಲೂಕು ಮೋಜಣಿದಾರರಿಗೆ ಸ್ಥಳತನಿಖೆ ಮಾಡಿ ವರದಿ ಸಲ್ಲಿಸಲು ತಿಳಿಸಲಾಗಿ, ಕಂದಾಯ ನಿರೀಕ್ಷಕರು ಮತ್ತು ತಾಲ್ಲೂಕು ಮೋಜಣಿದಾರರು ಸ್ಥಳ ತನಿಖೆಯನ್ನು 27.9.2014ರಂದು ನಡೆಸಿ ರಸ್ತೆ ಒತ್ತುವರಿಯಾಗಿರುವ ಬಗ್ಗೆ ವರದಿ ಸಲ್ಲಿಸಿದ್ದಾರೆ. ಅದರಂತೆ, ತಹಶೀಲ್ದಾರರು ದಿ.30.9.2014ರಂದು ಸರ್ಕಾರಿ ರಸ್ತೆಯಲ್ಲಿ ಕಟ್ಟಿರುವ ಕಾಂಪೌಂಡನ್ನು**

ತೆರವುಗೊಳಿಸಲು ಆದೇಶಿಸಿದ್ದಾರೆ. ಆದರೆ ಸದರಿ ಆದೇಶದಂತೆ ಒತ್ತುವರಿಯನ್ನು ಇದುವರೆಗೂ ತೆರವುಗೊಳಿಸಿರುವುದಿಲ್ಲ. ಸಹಾಯಕ ಆಯುಕ್ತರಿಗೂ ಹಲವಾರು ಸಲ ಮೌಖಿಕವಾಗಿ, ಖುದ್ದಾಗಿ, ಮನವಿಮಾಡಿದ್ದರೂ ಪರಿಗಣಿಸಿರುವುದಿಲ್ಲ. ಆದ್ದರಿಂದ, ಸಹಾಯಕ ಆಯುಕ್ತರು ದಿ.12.12.2014ರಂದು ಸ್ಥಿರ ಕಾಲಮಿತಿಯಲ್ಲಿ ಆದೇಶಹೊರಡಿಸಲು ಸೂಚಿಸಿದ್ದಾರೆ. ಎದುರುದಾರರು ಮರು ಆದೇಶ ಮಾಡಿ ರಸ್ತೆಯನ್ನು ಬಿಡಿಸಿಕೊಡುವುದಾಗಿ ಹೇಳಿದ್ದರೂ, ಶಾಸಕರಾದ ಶ್ರೀ ತುಕಾರಾಂ ಇವರ ದೂರವಾಣಿ ಕರೆಯ ಮೇರೆಗೆ ಕಂದಾಯ ನಿರೀಕ್ಷಕರು ದಾರಿ ಬಿಡಿಸಲು ಸಾಧ್ಯವಿಲ್ಲವೆಂದು ತಿಳಿಸಿರುವುದರಿಂದ ಸರ್ಕಾರಿ ರಸ್ತೆ ಹಾಗೂ ಶಾಲೆಯ ಜಾಗ ಬಿಡಿಸಿಕೊಡಲು ಕೋರಿದ್ದಾರೆ. ತಹಶೀಲ್ದಾರರ ದಿ.30.9.2014ರ ಆದೇಶದ ಪ್ರತಿ,ಕಂದಾಯ ನಿರೀಕ್ಷಕರಿಗೆ ಕೊಟ್ಟಿರುವ ಆದೇಶಧ ಪ್ರತಿ, ಸರ್ವೆ ಕಂದಾಯ ನಕ್ಷೆ, ಸಹಾಯಕ ಆಯುಕ್ತರ ಆದೇಶದ ಪ್ರತಿಗಳನ್ನು ಸಲ್ಲಿಸಿದ್ದಾರೆ. ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

3) ಸದರಿ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಯನ್ನು ಸಲ್ಲಿಸಲು ಸೂಚಿಸಲಾಯಿತು. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರಿನ ಅಂಶಗಳನ್ನು ಅಲ್ಲಗಳೆದು, ಡಾ.ಪ್ರಸನ್ನ ಹಾಗೂ ಡಾ.ನಿಂಗಪ್ಪ ಇವರು ಯಾವುದೇ ಸರ್ಕಾರಿ ಜಮೀನು ಒತ್ತುವರಿ ಮಾಡಿರುವುದಿಲ್ಲ, ಯಥಾಸ್ಥಿತಿಯಲ್ಲಿ ಸರ್ಕಾರಿ ಶಾಲೆಗೆ ಮತ್ತು ಜಮೀನುಗಳಿಗೆ ಹೋಗುವ ರಸ್ತೆ ಇದ್ದು, ಇದೇ ಸರ್ವೆ ನಂ.99ರಲ್ಲಿ 3 ಎಕರೆ ಜಮೀನನ್ನು ಆಶ್ರಯ ಯೋಜನೆಯಡಿಯಲ್ಲಿ ನೀಡಲಾಗಿದ್ದು, ಇದರಲ್ಲಿ ಸಾರ್ವಜನಿಕರು ಓಡಾಡಲು ರಸ್ತೆ ಇದ್ದು, ಡಾ.ಪ್ರಸನ್ನ ಮತ್ತು ಡಾ.ನಿಂಗಪ್ಪ, ಇವರ ಪೂರ್ವಜರು 80 x12 ರ ಪಟ್ಟಾ ಜಮೀನನ್ನು ರಸ್ತೆ ಸಲುವಾಗಿ ಬಿಟ್ಟುಕೊಟ್ಟಿರುತ್ತಾರೆ. ಸದರಿ ರಸ್ತೆಯು ಎಲ್ಲರಿಗೂ ಸೂಕ್ತವಾಗಿದೆ, ದೂರುದಾರರು ವೈಯಕ್ತಿಕ ಅನುಕೂಲಕ್ಕೆ ದೂರು ನೀಡಿರುತ್ತಾರೆ, ಹಾಲಿ ಆಶ್ರಯ ಕಾಲೋನಿಯಿಂದ ಕೆರೆ ಅಂಗಳದವರೆಗೆ ಬಿಡಿಸಿಕೊಟ್ಟ ರಸ್ತೆ ಸರಿಯಿದೆಯೆಂದು ತಿಳಿಸಿ ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ.

4) ಸದರಿ ವರದಿಯ ಮೇಲೆ ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, ತಮ್ಮ ಪ್ರತ್ಯುತ್ತರದಲ್ಲಿ ತಹಶೀಲ್ದಾರರು ಸರ್ವೆ ನಂ.561 ಮತ್ತು 563ರ ಮಧ್ಯದ ರಸ್ತೆ ಎಂಬುದಾಗಿ ತಪ್ಪಾಗಿ ನಮೂದಿಸಿದ್ದು, 599ರಲ್ಲಿನ ರಸ್ತೆಯ ಬಗ್ಗೆ ತಾನು ದೂರಿದ್ದು, ಒತ್ತುವರಿದಾರರಿಗೆ ಸರ್ವೆ ನಂ.591 ರ ಜಮೀನು ಸೇರಿದೆ. ಅವರ ಪೂರ್ವಜರು ಆಶ್ರಯ ಯೋಜನೆಗೆ 3 ಎಕರೆ ಕೊಟ್ಟಿರುವುದಾಗಿ ಹೇಳಿದ್ದು, ಸರ್ವೆ ನಂ.591 ರಲ್ಲಿ 4 ಎಕರೆ ವಿಸ್ತೀರ್ಣಕ್ಕೆ ಒಂದೇ

ಪಹಣಿ ಬರುತ್ತದೆ. ಒಂದು ಎಕರೆ ಜಾಗವನ್ನು ಭೂಪರಿವರ್ತನೆ ಮಾಡದೆ 9 ಸೈಟುಗಳನ್ನು ಮಾಡಿ ನೋಂದಾಯಿಸಿದ್ದಾರೆ, 18.3.2015ರಂದು ಚೋರನೂರು ಕಂದಾಯ ನಿರೀಕ್ಷಕರು ಕೂಡ್ಲಿಗಿಗೆ ಹೋಗಿದ್ದು, ಬೊಮ್ಮಘಟ್ಟ ಗ್ರಾಮಕ್ಕೆ ಅಂದು ಬಂದಿರುವುದಿಲ್ಲ, ಸುಳ್ಳು ಮಹಜರ್ ಮತ್ತು ಹೇಳಿಕೆಗಳನ್ನು 18.3.2015 ಎಂಬುದಾಗಿ ನಮೂದಿಸಿದ್ದು, ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಸಲ್ಲಿಸಿ, ಕ್ರಮಕೈಗೊಳ್ಳುವಂತೆ ಕೋರಿದ್ದಾರೆ.

5) ಈ ಪ್ರಕರಣದಲ್ಲಿ ದೂರುದಾರರು ಹಾಗೂ ಎದುರುದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದ್ದೇನೆ. ದಾಖಲೆಗಳನ್ನು ಗಮನಿಸಿದಾಗ ಕಂಡುಬರುವ ಅಂಶಗಳೇನೆಂದರೆ, ದಿ.30.4.2015ರಂದು ಆರಕ್ಷಕ ನಿರೀಕ್ಷಕರು, ಕೂಡ್ಲಿಗಿ ತಾ. ಇವರಿಗೆ ತಹಶೀಲ್ದಾರರ ಒಂದು ಆದೇಶ ಕಳುಹಿಸಿದ್ದು, ಸ.ನಂ.591ರಲ್ಲಿ ನಕಾಶೆಯಲ್ಲಿ ರಸ್ತೆ ಇರುತ್ತದೆ, ಕಂದಾಯ ನಿರೀಕ್ಷಕರು ಮತ್ತು ಮೋಜಣಿದಾರರು ಜಂಟಿಯಾಗಿ ಪರಿಶೀಲಿಸಿದಾಗ ಹಾಲಿ ನಕಾಶೆಯಲ್ಲಿ ರಸ್ತೆ ಇರುತ್ತದೆ, ಆದುದರಿಂದ ಆ ರಸ್ತೆಯಲ್ಲಿ ಕಟ್ಟಿರುವ ಕಂಪೌಂಡನ್ನು ತೆರವುಗೊಳಿಸಲು ಆದೇಶಿಸಿದ್ದಾರೆ. ಸಹಾಯಕ ಆಯುಕ್ತರು ದಿ.12.12.2014ರಂದು ಸರ್ವೆ ನಂ. 566 ರ ಒತ್ತುವರಿ ಸರ್ವೆ ನಕ್ಷೆ ಸಲ್ಲಿಸಲಾಗಿದ್ದು, ಕಾನೂನು ಪ್ರಕಾರ ಆದೇಶ ಹೊರಡಿಸುವಂತೆ ತಹಶೀಲ್ದಾರರು, ಸಂಡೂರು ಇವರಿಗೆ ಸೂಚಿಸಿದ್ದು, ಅದರಂತೆ ದಿ.22.12.2014ರಂದು ತಹಶೀಲ್ದಾರರು, ಸಂಡೂರು ಇವರು ಆದೇಶಿಸಿದ್ದು, ಸಂಡೂರು ತಾಲ್ಲೂಕಿನ ಚೋರನೂರು ಹೋಬಳಿ ಬೊಮ್ಮಘಟ್ಟ ಗ್ರಾಮದ ಸರ್ವೆ ನಂ. 591 ರಲ್ಲಿ ನಕಾಶೆ ಕಂಡ ಸರ್ಕಾರಿ ದಾರಿಯಿದ್ದು, ಅದನ್ನು ಖಾತೆದಾರರು ಮುಚ್ಚಿದ್ದು, ಸಾರ್ವಜನಿಕರಿಗೆ ಅನುಕೂಲವಾಗುವಂತೆ ತೆರವುಗೊಳಿಸಿ ಮುಕ್ತವನ್ನಾಗಿಸಲು ಆದೇಶಿಸಿದ್ದರೂ ಸಹಾ ಇಬ್ಬರೂ ಎದುರುದಾರರು ಯಾವುದೇ ರೀತಿಯ ಕ್ರಮಕೈಗೊಂಡಿಲ್ಲ ಎನ್ನುವುದು ದಾಖಲೆಗಳಿಂದ ತಿಳಿದುಬರುತ್ತದೆ.

ನಮ್ಮ ಸಂಸ್ಥೆಯಿಂದ ಆಕ್ಷೇಪಣೆ ಕೇಳಲಾಗಿ, ಹೊಸದಾಗಿ ಸರ್ವೆ ನಂ. 591ರಲ್ಲಿ 3 ಎಕರೆಯನ್ನು ಡಾ.ಪ್ರಸನ್ನ ಇವರ ಪೂರ್ವಜರು ಆಶ್ರಯ ಯೋಜನೆಗೆ ಕೊಟ್ಟಿದ್ದಾರೆ, ತಮ್ಮದೇ ಜಮೀನಿನಲ್ಲಿ ಬೇರೊಂದು ದಾರಿಯನ್ನು ಕೊಟ್ಟಿದ್ದಾರೆ, ಎಂಬುದಾಗಿ ತಿಳಿಸಿದ್ದಾರೆ. ತಾವು ಈಗಾಗಲೇ ಮಾಡಿದ ಆದೇಶಕ್ಕೆ ವಿರುದ್ಧವಾಗಿ ಅರ್ಜಿದಾರರಿಗೆ ಬೇರೊಂದು ರಸ್ತೆಯಿದೆ, ಎಲ್ಲಾ ಸಾರ್ವಜನಿಕರು ಅದನ್ನು ಬಳಸುತ್ತಿದ್ದಾರೆಂದು ತಿಳಿಸಿದ್ದಾರೆಯೇ ಹೊರತು 1ನೇ ಎದುರುದಾರರು ಹೊರಡಿಸಿದ ಆದೇಶವನ್ನು ಏಕೆ ಪರಿಪಾಲನೆ ಮಾಡಿಲ್ಲ ಎನ್ನುವುದನ್ನು ವಿವರಿಸಿರುವುದಿಲ್ಲ. ಆದುದರಿಂದ ಎದುರುದಾರರ ಆಕ್ಷೇಪಣೆಗಳನ್ನು ಒಪ್ಪಲಾಗುವುದಿಲ್ಲ. ಇದರಿಂದಾಗಿ 1 ಮತ್ತು 2ನೇ ಎದುರುದಾರರು – ತಹಶೀಲ್ದಾರರು ಹಾಗೂ ಕಂದಾಯ ನಿರೀಕ್ಷಕರು ಕರ್ತವ್ಯಲೋಪವೆಸಗಿರುವುದು

ಕಂಡುಬರುತ್ತದೆ. ಆ ಮೂಲಕ 1 ಮತ್ತು 2ನೇ ಎದುರುದಾರರು ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೇ, ಬೇಜವಾಬ್ದಾರಿಯಿಂದ ವರ್ತಿಸಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದಾರೆಂಬುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

6) ಆದುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ದೂರುದಾರರ ದುಮ್ಮಾನವನ್ನು ಈ ಕೆಳಕಂಡಂತೆ ಪರಿಹರಿಸಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

> "ಸಂಡೂರು ತಾಲ್ಲೂಕಿನ ಚೋರನೂರು ಹೋಬಳಿ ಬೊಮ್ಮಘಟ್ಟ ಗ್ರಾಮದ ಸರ್ವೆ ನಂ. 591 ರಲ್ಲಿನ ನಕಾಶೆಯ ಸರ್ಕಾರಿ ದಾರಿಯಿದ್ದು, ಅದನ್ನು ಖಾತೆದಾರರು ಮುಚ್ಚಿದ್ದು, ಸಾರ್ವಜನಿಕರಿಗೆ ಅನುಕೂಲವಾಗುವಂತೆ ತೆರವುಗೊಳಿಸಿ ಮುಕ್ತವನ್ನಾಗಿಸಲು ತಹಶೀಲ್ದಾರ್, ಸಂಡೂರು ಇವರು ದಿ.22.12.2014ರಲ್ಲಿ ಮಾಡಿರುವ ಆದೇಶದ ರೀತ್ಯಾ ಕ್ರಮವಹಿಸಿ ಅನುಪಾಲನಾ ವರದಿ ಸಲ್ಲಿಸಲು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಕಂದಾಯ ನಿರೀಕ್ಷಕರು, ಚೋರನೂರು, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲ, ಇವರಿಗೆ ನಿರ್ದೇಶಿಸುವುದು."

7) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 26-9-16

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.